# Haridasaru Kanda Sri Vijayarayaru

## ಗೋಪಾಲದಾಸರ ಕೃತಿ

ವಿಜಯ ಆರಿಂದೆನಗೆ ಆಗುತಿಹುದೋ।
ವಿಜಯರಾಯರ ದಿವ್ಯ ಚರಣದಿಂದಲ್ಲದೇ ॥ ಪ॥

ಪರತತ್ವ ವಿಚಾರ ಪರಮನಿಷ್ಠರ ಸಂಗ।
ಪರಿಪರಿಯ ಸುಕರ್ಮಪರಿಣಾಮವು॥
ಪರವಾದಿಗಳ ತುಚ್ಚೀಕರಿಸಿ ಅವರುಕಗಳ।
ಹರಿಯೇ ಸರ್ವೋತ್ತಮನೆಂದರಿದು ಬಾಳುವಂಥ ॥ 1॥

ಭೂಸುರರ ಸೇವೆಯಾತ್ರೆ। ದಾನವು ಧರ್ಮವು।
ಗ್ರಾಸ ಉಣ ಉಡವೋದು ಲೇಸು ಎಲ್ಲಾ।
ವಾಸುದೇವನ ಗುಣಗಳಾಶೆಯಲಿ ಕೇಳುತಾ।
ಕ್ಲೇಶತಟ್ಟದೆ ಹರಿವುಪಾಸನೆಯಮಾಳ್ಪಂಥ ॥ 2॥

ಜ್ಞಾನಿಗಳಿಂದ ಮಾನ ಕ್ಷೋಣಿಯೊಳಗೆಯಶಸ್ಸು।
ಹೀನಜನರಿಗೆ ದೈನ್ಯವನ್ನು ಬಡದೆ।
ನಾನಾಪರಿಕವನಗಳು ಜ್ಞಾನಿ ಸಮ್ಮತರಚಿಸಿ।
ಶ್ರೀನಿವಾಸನ್ನ ದಾಸಾನುದಾಸೆಂಬಂಥ ॥ 3॥

ಬಂಧು ಜನಸಂದಣಿ। ಚೆಂದುಳ್ಳ ಆಭರಣಾ।
ನಂದದಿ ಉಡುಗರೆ ಉತ್ಸಾಹವು॥
ಇಂದಿರೇಶನ ಸ್ತೋತ್ರದಿಂದಲೇ ದಿನವನ್ನು।
ಒಂದುಗಳಿಗೆ ಮರೆಯದಂದದಿ ಇರುವಂಥ ॥ 4॥

ಅಪಾರಜನುಮ ಇವರ ಪಾದ ಆಶ್ರೈಸಿ।
ಶ್ರೀಪತಿಯ ಧ್ಯಾನಮಾಡಿದಕಾರಣ॥
ಗೋಪಾಲವಿಠಲನ್ನ ರೂಪಧ್ಯಾನದಿ ನಿಲಿಸಿ।
ಈ ಪರಿಯಲಿ ಎನ್ನ ಕಾಪಾಡು ಎಂತೆಂಬ ॥ 5॥

-ತಂದೆ ವಿಜಯರಾಯ (ಪುಟ 11)

# ಶ್ರೀಮೋಹನವಿಠಲರ ಕೃತಿ

ಪರಮ ಹರುಷವಾಯಿತು ವಿಜಯರಾಯ।
ಗುರುಗಳಂಘ್ರಿಯನೆ ಕಂಡು ॥ ಪ॥

ಪರಿಪರಿ ಜನುಮದ ಥರಥರದಘಗಳು।
ತಿರುಗಿ ನೋಡುದಲೇವೆ ತೆರಳಿ ಪೋದವುಯಿಂದು॥ ಅ.ಪ॥

ಕಾನನದೊಳು ತಿರುಗಿ ತನ್ನ ಮಾತೆ।
ಯನು ಕಾಣದೆ ಚಿಂತಿಸಿ॥
ಧೇನಿಸಿ ಅರಸಲಾಕ್ಷಣದೊಳಗವಳ ವತ್ಸ
ತಾನು ಕೂಗಲು ಕಾಮಧೇನು ಒದಗಿದಂತೆ ॥ 1॥

ತರಣಿಯ ಕಿರಣದಿಂದ ತಪಿಸಿ।
ನೆರೆಬಾಯ ಬಿಡವುತ ಬಪ್ಪರನ॥
ಕರವ ಪಿಡಿದು ಸುರತರುವಿನ[illegible]ಯುಲ್ಲಿ ಕು।
ಳ್ಳಿರಿಸಿ ಕುಡಿಯೆದಿವ್ಯ [illegible]ರಸಿಯನಿತ್ತಂತೆ ॥ 2॥

ಧನವ ಪೋಗಾಡಿ ಕೊಂಡು ನರನು ಬಲು
ಮನಕ್ಲೇಶದಿಂದಿರಲು।
ಘನಮಹಿಮನೆ ನಮ್ಮ ಮೋಹನ ವಿಠಲ
ವನ ಕೈಯ್ಯೊಳಗ ಚಿಂತಾಮಣಿಯನು ಯಿತ್ತಂತೆ ॥ 3॥

- ಶ್ರೀಮೋಹನದಾಸರು, ತಂದೆ ವಿಜಯರಾಯ, (ಪುಟ-19)

# ಜಗನ್ನಾಥದಾಸರ ಕೃತಿ

ರತುನ ದೊರಕಿತಲ್ಲ! ಎನಗೆ ದಿವ್ಯ ರತುನ ದೊರಕಿತಲ್ಲ || ಪ||

ರತುನ ದೊರಕಿತು ಎನ್ನ ಜನುಮ ಪವಿತರವಾಯಿತು ಈ ದಿನದಿ ನಾ
ಯತನ ಗೈಯುತ ಬರುತಿರಲು ಪ್ರ
ಯತನವಿಲ್ಲದೆ ವಿಜಯರಾಯರೆಂಬೋ || ಅ.ಪ||

ಪಥದಿ ನಾ ಬರುತಿರಲು ಥಳಥಳವೆಂದು
ಅತಿ ಕಾಂತಿ ಝಳಪಿಸಲು ಬೆರಗಾಗುತ್ತ
ಅತಿ ಚೋದ್ಯನ ಕಾಣಲು ಸೇವಿಸುತ್ತಿರೆ
ಸತತ ಕರಪಿಡಿದಾದರಿಸಿ ಮನೋ
ರಥವ ಪೂರೈಸುತಲಿ ಎನಗೆ । ಸ
ನ್ಮತಿಯ ಪಾಲಿಸಿ ಮೋಕ್ಷ ಪಥವ
ಅತಿಶಯದಿ ತೋರುತ್ತ ಪೊರೆಯುವ || 1||

ಜ್ಞಾನವೆಂಬೊ ಪುತ್ಥಳಿ ಕಂಬಿಯಲ್ಲಿ
ಆಣಿಮುತ್ತಿನ ಭಕ್ತೀಲಿ ಸುಕೃತ ಮಾಲಾ
ನಾನಾವಿಧ ಹವಳದಲಿ ಸೇರಿಸುತಲಿ
ಪ್ರಾಣ ಪದಕವೆಂಬ ಮಾಲೇಯನು ಅನು
ಮಾನವಿಲ್ಲದೆ ಕೊರಳಿಗ್ಹಾಕುತ
ಗಾನದಿಂ ಕುಣಿಯುತ್ತ ಪಾಡುತ್ತ
ದೀನ ಜನರುದ್ಧಾರ ಗೈಯುತ || 2||

ಶೋಧಿಸಿ ಗ್ರಂಥಗಳ - ಸುಳಾದಿಯ
ಮೋದದಿಂದಲಿ ಬಹಳ ಕವಿತೆ ಮಾಡಿ
ಸಾಧುಜನಕೆ ಸಕಾಲ ಆನಂದ ವಿತ್ತು
ವಾದಿಜನರನ್ನು ಗೆದ್ದು ಬೋಧಿಸಿ
ಮಾಧವ ಜಗನ್ನಾಥವಿಠಲನ
ಪಾದ ಕಮಲಕೆ ಮಧುಪನಂದದಿ
ಸಾದರದಿ ತೋರುತ್ತ ಮೆರೆಯುವ || 3||

- ಶ್ರೀ ಜಗನ್ನಾಥದಾಸರ ಕೃತಿ ಸಮಗ್ರದಾಸಸಾಹಿತ್ಯ ಸಂಪುಟ 14 (ಪುಟ 185,186)

# ಗುರುಗೋವಿಂದದಾಸರ ಕೃತಿ

ವಿಜಯದಾಸರ ಭಜಿಸಿರೋ। ಸುಜನರೆಲ್ಲರು ನೀವು ॥ ಪ॥

ವಿಜಯದಾಸರ ಭಜಿಸೇ। ಕುಜನ ಮರ್ದನ ನಮ್ಮ
ವಿಜಯವಿಠಲ ತಾನೇ ನಿಜವ ತೋರುವ ಮನದಿ॥ ಅ.ಪ॥

ಮುನ್ನ ಸುರಲೀಲಾ ನೆನಿಸಿ ತಾ।
ಜನಿಸಿದಾ ತ್ರೇತಾಯುಗದಿ।
ದನವಿಜೆ ರಮಣ ಶ್ರೀ ಹನುಮ ಸೇವಿತನಾದ
ಶ್ರೀನಿವಾಸನ ಚರಣ ವನಜವ ಸೇವಿಸಿದಾ ॥ 1॥

ಸಕಲ ಸದ್ಗುಣ ಆಕಾರಾ।
ನಿಖಿಳ ಲೋಕದಾ ಧಾರಕಾ
ಪಾಕ ಶಾಸನ ಪೂಜ್ಯ ಗೋಕುಲ ರೊಡೆಯನ
ನಿಕಂಪಾನೆನುತ ಜನಿಸಿ ಕೃಷ್ಣನ್ನ ಪೂಜಿಸಿದಾ ॥ 2॥

ಸುರಪುರಿ ಮುನಿ ನಾರದಾ
ವರಕವಿಯಲ್ಲಿ ಜನಿಸಿ।
ತುರುಕರುವಾಗೆ ಅವರಾ ಚರಣವ ಸೇವಿಸಿದ।
ಮರಳಿ ಅವರ ಪುತ್ರ ಗುರುಮಧ್ವಪತಿ ಭೃಗುವಾ ॥ 3॥

ಪದಪಂಚ ಲಕ್ಷಾಗ್ರಂಥಕೆ
ಪಾದವೇ ನ್ಯೂನವಿರಲೂ।
ಪದಪದ್ಯ ಸುಳ್ಳಾದಿಯಲೀ ಪಾದಪೂರ್ತಿಯ ಮಾಡೇ।
ಮೊದದಲ್ಲುದಿಸಿದಾ ಬುಧನು ದಾಸಪ್ಪನೆನಿಸೀ ॥ 4॥

ಪರಮ ಕಾರುಣ್ಯಗುರುವೇ
ಕರವ ಪಿಡೀರಿ ಎನ್ನಾ
ಮರುತಾಂತರಾತ್ಮಾ ಗುರುಗೋವಿಂದವಿಠಲನ್ನ
ಚರಣವ ತೋರಿಸೀ ಕರುಣದಿ ಪೊಷಿಸೀ ॥ 5॥

-ಸತ್ಸಂಪ್ರದಾಯ ಭಜನಾ ಪದ್ಧತಿ, ಗುರುಕೃಪಾ ಗ್ರಂಥಮಾಲೆ ಪುಟ 19-20

# ಗುರುಗೋವಿಂದದಾಸರು ಕಂಡ ವಿಜಯದಾಸರು

ವಿಜಯರಾಯರ ಭಜಿಸದವ ನಿರ್ಭಾಗ್ಯಕಾಣೋ ॥ ಪ॥
ಅಜಭವಕಿಂತಧಿಕ ಗಜವರದ ಪರನೆಂದ ॥ ಅ.ಪ॥

ಋಷಿಗಳೆಲ್ಲರು ಕಲೆತು ಸತ್ರಯಾಗವ ಮಾಡೆ।
ಹೃಷಿಕೇಶ ಚತುರಾಸ್ಯ ಕೈಲಾಸವಾಸ॥
ಈ ಸುಮೂರ್ತಿಗಳಲ್ಲಿ ಮಿಗಿಲಾರು ಎಂದೆನ್ನೆ।
ಸೂಸಿ ಮೂಲೋರ್ಕಗಳ ಶ್ರೀಶ ಪರನೆಂದ ॥ 1॥

ದೇವಮುನಿ ನರನಾಗಿ ಭುವಿಯಲ್ಲಿ ಜನಿಸುತಾ।
ದೇವ ದೇವನ ಸ್ತೋತ್ರ ಕವನವನೆ ಗೈದಾ॥
ಆವಲಕ್ಷವು ಪಂಚಕೆ ನ್ಯೂನ ಪಾದವ ಮಾಡ್ದ।
ದೇವ ಮುನಿಸುತಗುರು ಮಧ್ವಪತಿ ವಿಟ್ಠಲಾ ॥ 2॥

ಜವನವರು ಕೊಂಡ್ಹೋಗೆ ಜವಪುರಿಗೆ ತನಯನಾ।
ಜವನೊಡನೆ ಶೆಣೆಸಾಡಿ ಹರಿಗೆ ಮೊರೆಯಿಡಲು।
ಜೀವದಾನವ ಪೊಂದಿ ಚಿಪ್ಪಗಿರಿಗೆ ತೆರಳಲು
ಜೀವಂತನಾದನ್ನೆ ತನಯ ಮೋಹನ್ನಾ ॥ 3॥

ಪೂರ್ಣಬೋಧರ ಮತವ ಗಾನ ರೂಪದಿ ಪೇಳಿ।
ಪೂರ್ಣಗುಣ ಹರಿಯೆಂದು ಸ್ಥಾಪಿಸುತಲೀ।
ಪೂರ್ಣ ಸಂಪ್ರೀತಿಯಲಿ ನೆಲೆಸಿ ಚಿಪಗಿರಿಯಲ್ಲಿ
ಪೂರ್ಣ ನಂಘ್ರಿಯ ಭಜಿಸಿ ಭಕ್ತರನೆ ಪೊರೆದ ॥ 4॥

ಯುವ ಸಂವತ್ಸರ ಸುಕಾರ್ತಿಕದ ಸಿತಪಕ್ಷ
ಯಾವ ಗುರುದಿನ ದಶಮಿ ಮೊದಲ್ಯಾಮದಿ।
ಪವನಾಂತರಾತ್ಮಗುರುಗೋವಿಂದವಿಟ್ಠಲನ
ಸ್ತವನದಿಂದಲಿ ಪೊರಟ ಹರಿಯಪುರಕಾಗ ॥ 5॥

-ಶ್ರೀಗುರುಗೋವಿಂದರ್ಶನ, (ಪುಟ 174,175,233,234)

# ಶ್ರೀ ಆನಂದದಾಸರಕೃತಿ

ಎನ್ನ ಕುಲವಿಂದು ಪಾವನವಾಯಿತು
ಮನ್ನಿಸಿ ವಿಠಲ ಮನಿಗೆ ಬರಲಾಗಿ ॥ ಪ॥

ಹುಟ್ಟಿದಾರಭ್ಯ ನಾ ಕಷ್ಟಬಡುತಿರಲಾಗಿ
ಜ್ಯೇಷ್ಠ ಭ್ರಾತೃವಿಗೆ ಮನ ಮುಟ್ಟಿಬಂದು
ಕಷ್ಟವನ್ನೆ ಪರಿಹರಿಸಿ ಇಷ್ಟಾರ್ಥವನಿತ್ತು
ಪಟ್ಟವನು ಕಟ್ಟಿ ವೈರಾಗ್ಯಭಾಗ್ಯದಲಿ ॥ 1॥

ಕಮಲನಾಭನ ಪದಕೆ ಗಯದಲ್ಲಿ ಪಿಂಡವನು
ಅಮಲ ಮನದಿಂದಲಿ ಹಾಕಲಾಗಿ
ಮಮ ಪಿತಪಿತಾಮಹನು ನಾಯಾಗಿ ಜನಿಸಿರಲು
ಕ್ರಮದಿಂದ ಉದ್ಧಾರಮಾಡಿದ ಕಾರಣದಿಂದ ॥ 2॥

ವೈರಾಗ್ಯ ಜ್ಞಾನಭಕುತಿಯಲಿ ಇವರ ಸರಿ
ಆರನಾದರೆ ಕಾಣೆ ಸೀಮೆಯೊಳಗೆ
ಕಾರುಣ್ಯದಲಿ ಈ ಪರಿ ಚರಿಸುವ ಚರಿತೆ
ಧಾರುಣಿ ಸುರರೆಲ್ಲ ಕೇಳಿ ಹಿಗ್ಗಿದರು ॥ 3॥

ಬಾವನ್ನದಾ ಬಳಿಯ ಬೇವಿನ ಬನವು ಇರೆ
ಪಾವಮಾನಿ ಬಂದು ಬೀಸಲಾಗಿ
ಪಾವನವೆ ಆಗಿ ಅದರಂದದಲ್ಲಿ ಆಗುವುದು
ಈ ವಿಚಾರವು ತಿಳಿದು ಆದವು ಸಂತೋಷ ॥ 4॥

ಪುರಂದರದಾಸರ ಮನೆಯಲ್ಲಿ ಆವಿನ
ಶರೀರವಾಗಿದ್ದ ಕಾರಣದಿಂದಲಿ
ಸಿರಿಯರಸ ಹಯವದನವಿಠಲನು ಮನಮೆಚ್ಚಿ
ಸಿರಿಪಾದವನೆ ತೋರಿ ಕವಿತೆಯನ್ನು ಪೇಳಿಸಿದ ॥ 5॥

# ತಂದೆ ವೇಂಕಟೇಶವಿಠ್ಠಲರ ಕೃತಿ

ವಿಜಯಗುರುಗಳಂಘ್ರಿಕಮಲ। ಭಜನೆ ಮಾಡಿರೋ ॥ ಪ॥

ಸುಜನ ಕೃತಜ್ಞಾನಾಧ್ವರ ಋ। ತ್ವಿಜನ ಪಾಡಿರೋ ॥ ಅ.ಪ॥

ವಿಜ್ಞಾನಪ್ರದ ಜ್ಞಾತವ್ಯ ಸುಜ್ಞಾನ ಖಣಿ।
ಅಜ್ಞಾನೋಗ್ರ ತಿಮಿರಾರ್ಕಾನುದ್ವಿಗ್ನಮುನಿಮಣಿ॥
ಯಜ್ಞಾಮಗ್ನಾಭಿಜ್ಞ ಶ್ರೀಸರ್ವಜ್ಞಪ್ರಿಯವಾಣಿ।
ವಿಘ್ನ ಕಳೆದಲ್ಪಜ್ಞರ ಪಾಲಿಪಪ್ರಾಜ್ಞಾ ವರದಾನಿ ॥ 1॥

ಅಂಭೋರುಹಸಂಭವೋದ್ಭವಂಭೋಜಭೃಂಗ।
ಶಂಭು ಸರ್ವೋತ್ತಮಾಶಂಕರಂಭಾಮಾತಂಗ॥
ಕಂಬು ಗದಾ ಅಂಬುಜಾರಿ ಬಿಂಬ ಜಹ್ನಾಂಗ।
ಬಿಂಭ ಕ್ರಿಯಭಾವಜ್ಞಾತ ಗುಂಭಾಂತರಂಗ ॥ 2॥

ವಿಪ್ರಜಾತಿ ವಿಪುಳಖ್ಯಾತಿ ಕ್ಷಿಪ್ರ ಫಲದಾತ।
ಸುಪ್ರಸಾದವಾಣಿ ಅಮಿತ ಪ್ರಮತಿಯತಿಹಿತ॥
ಅಪ್ರತೀಕಾಲಂಬ ಶ್ರೀಶ ಸ್ವಾಪರೋಕ್ಷಿತ।
ಅಪ್ರಬುದ್ಧಪಾಲ ಕಾರುಣ್ಯಾಪ್ರಕಾಶಿತ ॥ 3॥

ಕೀರ್ತಿತವ್ಯ ಕಾವ್ಯಚಾರ್ಯ ಸ್ಫೂರ್ತಿದಾಯಕ।
ತೀರ್ಥಕ್ಷೇತ್ರಾದ್ಯಟನಶೀಲ ಸಾರ್ಥಕಾಯಕ॥
ಕಾರ್ತಸ್ವರೇತ್ಯಾದಿ ಕಾಷ್ಠ ಕೃಷ್ಣವರ್ತ್ಮಕ।
ಪಾರ್ಥಮಿತ್ರ ಸ್ತೋತ್ರರತಿ ಪುಷ್ಪಸಾಯಕ ॥ 4॥

ದ್ವಂದ್ವಾತೀತ ಬಂಧುರಾತ್ಮಾನಂದ ತುಂದಿಲ।
ಸಂದರ್ಶನಾದೇವ ಪುನಂತಿ ವಿಗತವಿಹ್ವಲ॥
ಮಂದಾತ್ಮಾನಾಗಿರಲೇನಿವರ ನಂಬಲನುಗಾಲ।
ಮುಂದೆ ಕುಣಿವ ತಂದೆ ವೆಂಕಟೇಶವಿಠ್ಠಲ ॥ 5॥

-ಎಸ್.ಜಿ. ರಾಮಚಂದ್ರರಾವ್‌ರಲ್ಲಿರುವ ಹಸ್ತ ಪ್ರತಿ

# ಶ್ರೀಬಾದರಾಯಣವಿಠ್ಠಲರ ಕೃತಿ

ನೀನುದಾಸಿನ ಮಾಡಲೇನುಗತಿ ಮುಂದೆನಗೆ
ದೀನಜನ ದಿವಿಜ ವೃಕ್ಷ ॥ ಪ॥

ಜ್ಞಾನಿಕುಲತಿಲಕ ಗೋಪಾಲದಾಸರಿಗೊಲಿದ
ಜಾಣಗುರು ವಿಜಯರಾಯಾ ಜೀಯಾ ॥ ಅ.ಪ॥

ಪಡೆದ ತಾಯಿತಂದೆಗಳು ವೊಡಲೊಳುದಿಸಿದ ಮಗನ
ಬಿಡಲು ಪಾಲಿಸುವರಾರೋ
ಗಿಡ ಹಾಕಿದವ ಗಿಡದ ಬುಡವ ಕಡಿವೆನೆನಲು ಕೈ
ಪಿಡಿದು ನಿಲ್ಲಿಸುವರಾರೋ
ನಡುನೀರಿನೊಳು ನಾವಿ ನಡೆಸುವನೆ ಕೈಬಿಡಲು
ದಡಕೆ ಸೇರಿಸುವರಾರೋ
ಪೊಡವಿಯಾಳುವ ಅರಸು ಬಲ್ ಬಡವನಪರಾಧ
ಒಡಂಬಡದೆ ದಣಿಸುತಿರೆ ದಿಕ್ಕುದಾರೆಲೋ-ಗುರುವೆ ॥ 1॥

ಕರಪಿಡಿದ ಸತಿಯ ಪರಪುರುಷಗೊಪ್ಪಿಸಿ ಪತಿಯು
ಜರಿದು ಬಿಡುವುದು ನ್ಯಾಯವೇ
ಕುರುಡನಿಗೆ ಕರವಿತ್ತು ಕರದೊಯ್ದು ಕುಣಿಯಲ್ಲಿ
ಜರಿದು ನಗುವುದು ನ್ಯಾಯವೇ
ಕುರಿಹಿಂಡುಗಳ ಸಾಕಿ, ಕರೆದು ಹೆಬ್ಬುಲಿ ನಾಯಿ
ನರಿಗುಣಿಸುವುದು ನ್ಯಾಯವೇ
ನಿರುತ ತವಚರಣ ನೆರೆ ತಂಪಿನೊಳಗೇ ಯನ್ನ
ಕರೆದು ಸಾಕದೆ ದೂರ ನೋಡುವರೇ-ಗುರುವೆ ॥ 2॥

ಬಿಸಿಲಿಂದ ಬಾಯಾರಿ ಹಸುಗೂಸು ನೀರೆನಲು
ಬಿಸಿ ಬಿಸಿ, ಜಲವೀವರೇ
ಹಸಿವೆರೆತು ತಾಯೆ ತನ್ನ ಶಿಶುವಿಂಗೆ ಮೋಸದಲಿ
ವಿಷಬೆರಸಿ ತುತ್ತೀವಳೇ
ಅಸಮಕರುಣಾಬ್ಧಿ ನಿನ್ನೊಶವಾದವನ ಬಿಡಲು
ಕುಶಲ ಕರುಣಿಗಳು ನಗರೇ
ಋಷಿಕುಲಾರ್ಚಿತ ಬಾದರಾಯಣವಿಠಲ ನಿ-
ನ್ನೊಶವಾದ ಸೌಭಾಗ್ಯದಲ್ಲೆನ್ನ ಮರೆವರೇ-ಗುರುವೇ ॥ 3॥

# ರಘುಪತಿವಿಠಲರ ಕೃತಿ

ವಿಜಯರ ಭಾಗ್ಯವಿದು ತ್ಯಜಿಸದೆ
ನಮ್ಮನು ಬಿಡದೆ ಪೊರೆವುದು ॥ ಪ॥

ಅಧಮರಾದವರೆಲ್ಲ ಬುಧರಾಗಿ ಇರುವದು।
ಸಾಧುಮಾರ್ಗಗಳನುಸರಿಸುವುದು।
ಭೇದಾರ್ಥದಲಿ ದೃಢವಾಗಿ ಎಂದೆಂದು ಅಪ।
ರಾಧ ಮಾಡದೆ ಬಾಳುವೆಲ್ಲ ॥ 1॥

ಯಾತ್ರಿತೀರ್ಥಕೆ ಪೋಗಿ ಸ್ತೋತ್ರದಿ ಹರಿಯಪಾಡಿ
ಪಾತ್ರರಾದವರ ಸಂಗಡ ನಲಿದು।
ಗಾತ್ರಪರವು ಮರೆದು ಧಾತ್ರಿಯೊಳಗೆ ಸುಜನ
ಮಿತ್ರರೆನಿಸಿ ಬದುಕುವರೆಲ್ಲ ॥ 2॥

ನಿಂದೆ ವಂದನೆಗಳು ವಂದೆರಡೆಣಿಸದೆ।
ಸಂದೇಹ ಮನದಿ ಲೇಶವು ತಾಳದೆ ಮಂದರ
ಧರ ಎಲ್ಲರಿಂದ ಯೇನಾಡಿಸಲಾ।
ನಂದವೆಂದು ಹಿಗ್ಗುವುದೆಲ್ಲ ॥ 3॥

ಬಡತನ ಭಾಗ್ಯವೆಂದಡಿಗಡಿಗೆ ಮನ।
ಕಡು ಮರುಗದೆ ಹಿಗ್ಗದೆ ನಿತ್ಯ।
ಸಡಗರ ಸಾಧನ ಬಿಡದೆ ಭೂಷಣ ವೆಂದಡಿ
ಇಡುವದು ತೊಡುವರು ಸತ್ಕರ್ಮ ಸರ್ವದ ॥ 4॥

ಅಂದಣ ಕುಂದಣ ಮಂದಿರ ಬಯಸದೆ
ನಿಂದಿರ ದೊಬ್ಬರ ಹಂಗಿನಲಿ।
ಇಂದಿರಾಪತಿ ರಘುಪತಿವಿಠ್ಠಲ ಗುಣ।
ವೃಂದಪರಿಪೂರ್ಣನೆಂದು ಬಾಳುವದೆಲ್ಲ ॥ 5॥

-ಶ್ರೀ ರಘುಪತಿ ವಿಠ್ಠಲರ ಕೃತಿ, ತಂದೆ ವಿಜಯರಾಯ, (ಪುಟ-53)

Courtesy:RangaVittala